C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 110/2021

ದಿನಾಂಕಃ 25.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಡಿ.ಎಂ.ಎಂ. ವಕೀಲರಿಂದಃ

1) ಜಾಫರ್ ಗೆ ನನ್ನ ಅಕ್ಕನನ್ನು ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಆದಕಾರಣ ಚಾಸಾ 1 ಅಫೀಜ್ ನನಗೆ ಭಾವನಾಗಬೇಕು ಎಂದರೆ ಸರಿ. ನಾನು ಅಂಗಡಿಯಲ್ಲಿ ಟೀಯನ್ನು ಕುಡಿಯುತ್ತಿದ್ದಾಗ ಚಾಸಾ 1 ರವರನ್ನು ಹೊರತು ಪಡಿಸಿ, ಬೇರೆ ಯಾರು ಇದ್ದರು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ನಾನು ಮತ್ತು ಚಾಸಾ 3 ರಿಜ್ವಾನ್ ಇದ್ದೆವು ಎಂದು ನುಡಿಯುತ್ತಾರೆ. ನಮ್ಮ 3 ಜನರನ್ನು ಹೊರತು ಪಡಿಸಿ, ಹೋಟೆಲ್ ನಲ್ಲಿ ಬೇರೆ ಯಾರು ಯಾರು ಜನರು ಇದ್ದರು, ಅವರು ಯಾವ ಯಾವ ಊರಿನವರು ಇದ್ದರು ಎಂದು ನನಗೆ ಗೊತ್ತಿಲ್ಲ. ಮೂರು ಜನರು ಬಂದಿದ್ದ ಬೈಕ್ ನಂಬರ್ ಅದರ ಕಂಪನಿಯ ಹೆಸರು, ಮಾಲಿಕರು ಯಾವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಮುಮಾ.1 ರಾಡನ್ನು3 ಜನ ಆರೋಪಿತರು, ಗಾಡಿಯಲ್ಲಿ ಬಂದಿದಾಗ 1 ನೇ ಆರೋಪಿ ಇಮ್ದಾದ್ ರಾಡನ್ನು ತಂದಿದ್ದರು. ರಾಡಿನ ಉದ್ದ ಮತ್ತು ಅಗಲವನ್ನು ನಾನು ಎಲ್ಲಿಯೂ ಹೇಳಿಲ್ಲ ಎಂದರೆ ಸರಿ.

2) ಘಟನೆ ನಡೆದ ಸ್ಥಳದ ಮುಂದೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗದಲ್ಲಿ ನಾಗಮಂಗಲ ಪೊಲೀಸ್ ಠಾಣೆ, ಆಸ್ಪತ್ರೆ, ಡಿವೈಎಸ್ಪಿ ಕಚೇರಿ ನಂತರ ಸರ್ಕಲ್ ಇನ್ಸ್ಪೆಕ್ಟರ್ ಕಚೇರಿ ಇದೆ ಎಂದರೆ ಸರಿ. ಚಾಸಾ 1 ಗಾಯಾಳವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಆಗಲೀ ತದನಂತರವಾಗಲೀ ನಾನು ಪೊಲೀಸರಿಗೆ ದೂರನ್ನು ಕೊಟ್ಟಿರಲಿಲ್ಲ ಎಂದರೆ ಸರಿ. ನಾನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿಲ್ಲ ಎಂದರೆ ಸರಿ.ಆದ್ದರಿಂದ ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ಗಲಾಟೆಯಾದ 2 ದಿವಸಕ್ಕೆ ಪೊಲೀಸರು ನನಗೆ ಫೋನ್ ಮಾಡಿ ಠಾಣೆಗೆ ಕರೆಸಿಕೊಂಡಿದ್ದರು ಹಾಗೂ ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಪೊಲೀಸರು ನನಗೆ ಇದಕ್ಕೆ ಸಂಬಂಧಿಸಿದಂತೆ ಬರವಣಿಗೆಯಲ್ಲಿ ನೋಟಿಸನ್ನು ಕೊಟ್ಟಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದ ನಂತರ, ಪೊಲೀಸರು ನಾನು ಘಟನಾ ಸ್ಥಳಕ್ಕೆ ಬಂದಿರುವ ಬಗ್ಗೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಬರವಣಿಗೆಯನ್ನು ಅಲ್ಲಿ ಮಾಡಿಕೊಳ್ಳಲಿಲ್ಲ.

3) ನಿಪಿ.2 ಮಹಜರಿನಲ್ಲಿ ಪೊಲೀಸರು ಏನು ಬರೆದಿದ್ದಾರೆ, ಎಷ್ಟು ಪುಟಗಳಿವೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ನನಗೆ ಪೊಲೀಸರು ಓದಿ ಹೇಳಿದ್ದರು ಎಂದು ನುಡಿಯುತ್ತಾರೆ ಹಾಗೂ ಎಷ್ಟು ಪುಟಗಳಿವೆ, ಎಷ್ಟು ಪ್ಯಾರಾಗಳಿವೆ ಎಂದು ನನಗೆ ಹೇಳಲು ಆಗುವುದಿಲ್ಲ. ಯಾವ ಒಕ್ಕಣೆಯ ಆದ ನಂತರ ನಾನು ಸಹಿಯನ್ನು ಮಾಡಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರು ನನಗೆ ತೋರಿಸಿದ ಜಾಗದಲ್ಲಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ಮುಮಾ 4 ಸಾದಾ ಮಣ್ಣು ಮತ್ತು ಮುಮಾ 5 ರಕ್ತದ ಕಲೆ ಇರುವ ಮಣ್ಣನ್ನು ತೆಗೆದುಕೊಂಡಿದ್ದ ಸಂದರ್ಭದಲ್ಲಿ ಇವುಗಳ ಫೋಟೋಗಳನ್ನು ತೆಗೆಸಿರಲಿಲ್ಲ. ಸಾಮಾನ್ಯವಾಗಿ ಮು ಮಾ 1 ರಾಡು ತರಹದ ರಾಡು ಗುಜುರಿ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಪೊಲೀಸರು, ನೀನು ಮನೆಯಲ್ಲಿ ಇಟ್ಟಿರುವ ರಾಡನ್ನು ತಂದುಕೊಡು ಎಂದು ನನಗೆ ಬರವಣಿಗೆ ಮೂಲಕ ಹೇಳಿರಲಿಲ್ಲ ಎಂದರೆ ಸಾಕ್ಷಿಯು ಫೋನ್ ನಲ್ಲಿ ಹೇಳಿದ್ದರು ಎಂದು ನುಡಿಯುತ್ತಾರೆ. ಮು ಮಾ1 ರಾಡನ್ನು ಆರೋಪಿಗಳು ಉಪಯೋಗಿಸಿದ್ದರು ಎನುನವುದಕ್ಕೆ ವಿಶೇಷವಾದ ಗುರುತನ್ನು ಅದರ ಮೇಲೆ ನಾನು ಇಟ್ಟುಕೊಂಡಿಲ್ಲ ಎಂದರೆ ಸರಿ. ಪೊಲೀಸರು ನನಗೆ ಫೋನ್ ಮೂಲಕ ಮಹಜರ್ಗೆ ಬರುವಂತೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳದಿಂದ ಮುಮಾ 4 ಸಾದಾ ಮಣ್ಣು ಮತ್ತು ಮುಮಾ 5 ರಕ್ತದ ಕಲೆ ಇರುವ ಮಣ್ಣನ್ನು ನನ್ನ ಮುಂದೆ ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ಸ್ಥಳದಲ್ಲಿ ಸಹಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ ಹಾಗೂ ಪೊಲೀಸ್ ಠಾಣೆಗೆ ಮಹಜರ್ ನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮು ಮಾ 1 ರಾಡನ್ನು ಜೊತೆಯಲ್ಲಿ ತಂದು ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ/ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಮತ್ತು ಜಾಫರ್ ನನ್ನ ಅಣ್ಣನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಕೊಟ್ಟಿದ್ದ ಹೇಳಿಕೆಯನ್ನು ಯಾವ ಇಸವಿ, ಯಾವ ತಿಂಗಳು ಮತ್ತು ಯಾವ ದಿನಾಂಕದಂದು ಮತ್ತು ಹೇಳಿಕೆಯನ್ನು ದಾಖಲು ಮಾಡಿದ್ದ ಪೊಲೀಸರ ಹೆಸರು ಮತ್ತು ಅವರ ಹುದ್ದೆ ಯನ್ನು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಹೇಳಿಕೆ ಕೊಟ್ಟು 7 ವರೆ ವರುಷ ಆಗಿರುವುದರಿಂದ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.